‘ಅರೆ ಈ ಹುಚ್ಚನನಮಗನಿಗೆ ಹೆಂಗೆ ಗೊತ್ತಾಯಿತು ನನ್ನ ಮೂಗು, ಅದೂ ಕತ್ತಲಲ್ಲಿ, ಕರಿ ಮೂಗು’ ಎಂದು ಆಶ್ಚರ್ಯಗೊಂಡ. ಹುಚ್ಚ, ‘ಮಾಡುವಾಗ ಕತ್ತಲಲ್ಲಿ ಕಾಣಲ್ವಾ ಅದು, ಯೂ ಈಡಿಯಟ್ಸ್’ ಎಂದು ಉಗಿದ. ಅವನ ವೃಷಣಗಳು ಆ ಕಡೆ ಈ ಕಡೆ ಗಡಿಯಾರದ ಪೆಂಡುಲಮ್ ತರ ಅಲ್ಲಾಡುತ್ತಿದ್ದವು. ಆ ಜಾಗದ ಬಳಿ ಒಂದು ಜೇನುಹುಳುವಿನ ತರದ್ದು ಬಂದು ಝೀ ಎನ್ನತೊಡಗಿತು. ‘ಸಾಯಿಸುವ ತನಕ ಬಿಡಲಿಲ್ಲವಲ್ರೋ, ನಿಜವಾಗಿ ಸಾಯಿಸಿದ್ದಲ್ಲದೆ, ಕಥೆಯಲ್ಲೂ ಬಿಡಲಿಲ್ಲವಲ್ರೋ’ ಎಂದು ಬೈಯುತ್ತ, ಉಗುಳುತ್ತ ಅವನು ‘ಶ್’ ಎಂದು ಜೇನುಹುಳುವನ್ನು ಓಡಿಸುತ್ತ ಪಕ್ಕದ ಕತ್ತಲಲ್ಲಿ ಕರಗಿದ. ಅವರಿಬ್ಬರೂ ಕವಲೊಡೆದ ದಾರಿಯಲ್ಲಿ ಒಂದೊಂದು ದಾರಿಯನ್ನು ಹಿಡಿದು ಹೋದರು. ಹೋಗುವಾಗ ಅವನ ಆ ಕಡೆಯ ಮಾತುಗಳು ಅವರ ಒಳಗೆ ಕೀಟದಂತೆ ಕೊರೆಯುತ್ತಿದ್ದವು.

‘ರಾತ್ರಿ ಎಲ್ಲಿಗೆ ಹೋಗಿದ್ದಿರಿ?’ ಕಪ್ಪು ಮೂಗಿನ ಮನುಷ್ಯನ ಹೆಂಡತಿ ಕೇಳಿದಳು, ‘ಅಲ್ಲದೆ ನಿನ್ನೆ ಡ್ಯೂಟಿಗೂ ಹೋಗಿರಲಿಲ್ಲವಂತೆ?’ ಅವನ ಹೆಂಡತಿ ಮರುದಿನ ಬೆಳಗ್ಗೆ ಕೇಳಿದಳು. ಬೆಳಗಿನ ಸೂರ್ಯ ಅವನ ಮೂಗಿನ ಮೇಲೆ ಇತ್ತು. ಅವನು ಅವಳ ಮಾತುಗಳಿಗೆ ಪ್ರತಿಕ್ರಿಯೆ ನೀಡಲಿಲ್ಲ. ಅವಳು ಮುಂದುವರೆದು, ‘ಒಳ್ಳೆಯ ಗೆಳೆಯನ್ನ ಗಂಟು ಹಾಕಿಕೊಂಡಿದಿಯ. ಅವನಿಗೇನು ಅಪ್ಪ ಮಾಡಿದ ಆಸ್ತಿ ಇದೆ, ಅಲ್ಲದೆ ಹೆಂಡತಿನೂ ನೌಕರಿ ಮಾಡ್ತಾಳೆ. ಮಕ್ಕಳುಗಳನ್ನ ಯಾವುದೊ ಬೋರ್ಡಿಂಗ್ ಸ್ಕೂಲಿಗೆ ಹಾಕಿದಾನೆ. ಇನ್ನೇನು ಕೇಮು ಅವನಿಗೆ ನಿನ್ನಂಥವರ ಜೊತೆ ಸುತ್ತಾಡೋದು’ ಎಂದು ತನ್ನ ಗಂಡನನ್ನು ಮತ್ತು ಅವನ ಸ್ನೇಹಿತನನ್ನು ಬೈದಳು. ಅದಕ್ಕೂ ಯಾವ ಪ್ರತಿಕ್ರಿಯೆ ನೀಡಲಿಲ್ಲ ಅವನು. ಅವನಿಗೆ ಅವನ ನೋಟದಲ್ಲೆಲ್ಲ ಅವನ ಮೂಗೇ ಕಾಣುತ್ತಿದೆ. ಅವಳು ಕಾಫಿಯನ್ನು ಕೊಟ್ಟಳು. ಬಿಸಿ ಕಾಫಿಯನ್ನು ಎತ್ತಿ ತನ್ನ ಮೂಗಿನ ಮೇಲೆ ಸುರುವಿಕೊಂಡ. ‘ಅರೆ ನಿಮಗೆ ಹುಚ್ಚು ಗಿಚ್ಚು ಏನಾರ ಹಿಡಿದಿದೆಯಾ?’ ಅಂದಳು. ರಾತ್ರಿಯ ಹುಚ್ಚನ ಮಾತುಗಳು ನೆನಪಾಗಿ ಮಾಯವಾದವು. ‘ಅಲ್ಲರಿ ಮೊದಲೆಲ್ಲ ಇಷ್ಟೊಂದು ತಲೆಕೆಡಿಸಿಕೊಳ್ಳದವರು ಈಗ ಯಾಕೆ ಹೀಗೆ. ಆ ಮೂಗು ನಿಮ್ಮನ್ನು ಏನು ಮಾಡುತ್ತೆ’ ಎಂದು ಬೈದಳು. ಮುಂದುವರೆದು, ‘ನಿಮ್ಮ ಮೂಗಿನಿಂದಾಗಿ ನನಗೆ ನೆಮ್ಮದಿಯೇ ಇಲ್ಲದ ಹಾಗೆ ಆಯಿತು. ಅಪ್ಪ ಹೇಳಿದರು ಒಳ್ಳೇ ಹುಡುಗ, ಇವುನ್ನೇ ಮದುವೆ ಆಗು ಅಂಥ. ಅದಕ್ಕೆ ಆದೆ. ಆದಾಗಿಂದ ಸುಖ ಇಲ್ಲ, ನೆಮ್ಮದಿ ಇಲ್ಲ. ನಿನ್ನ ಮೂಗಿನಿಂದಾಗಿ ನಮಗೊಂದು ಹುಳನೂ ಹುಟ್ಟಲಿಲ್ಲ. ಇನ್ನೂ ಸಾಯೋ ತನಕ ನಿನ್ನ ಜೊತೆ ಹೇಗೆ ಏಗಬೇಕೋ ಏನೋ’ ಎಂದು ಬೇಸರಗೊಂಡಳು.

ಅವಳ ಯಾವ ಬೈಗುಳಕ್ಕೂ ಅವನು ಕ್ಯಾರೆ ಅನ್ನಲಿಲ್ಲ. ಅವನು ಇತ್ತೀಚೆಗೆ ಕೆಲಸಕ್ಕೂ ಸರಿಯಾಗಿ ಹೋಗದೆ ಮೂಗಿನ ಬಗ್ಗೆಯೇ ಯೋಚಿಸತೊಡಗಿದ್ದ. ಒಬ್ಬೊಬ್ಬನೇ ಅಲೆದಾಡಲು ಶುರುಮಾಡಿದ್ದ. ದೇವರು, ಧರ್ಮಗಳ ಬಗ್ಗೆ ಅನಾಸಕ್ತಿಯನ್ನು ಹೊಂದಿದ್ದ ಅವನು ಮೂಗಿನಿಂದಾಗಿ ಜ್ಯೋತಿಷಿಗಳನ್ನು ಭೇಟಿ ಮಾಡತೊಡಗಿದ್ದ. ಮತ್ತು ದರ್ಗಾ, ಮಂದಿರಗಳನ್ನು ಸುತ್ತಿ, ಅಲ್ಲೆಲ್ಲ ಸಮಾಧಾನ ಸಿಗದೆ, ಮತ್ತೆ ಅವುಗಳ ಕಡೆ ಹೋಗುವುದನ್ನು ನಿಲ್ಲಿಸಿದ್ದ. ಇನ್ನೂ ಅನೇಕರನ್ನು ಭೇಟಿಮಾಡಿ ತನ್ನ ಪೂರ್ವಿಕರಿಗೆ ಯಾರಿಗಾದರೂ ಅವನ ತರದ ಮೂಗು ಇತ್ತೆ ಎಂಬುದನ್ನು ವಿಚಾರಿಸಿದ. ಎಲ್ಲಿಯೂ ಅವನಿಗೆ ಉತ್ತರ ಸಿಗಲಿಲ್ಲ.

ಒಂದು ದಿನ ಪ್ರಾಣ ಹೋದರೂ ಪರವಾಗಿಲ್ಲ ಮೂಗನ್ನು ಅಪ್ಪಚ್ಚಿ ಮಾಡಿಕೊಳ್ಳಬೇಕು, ಆಗ ಏನಾದರೂ ಹೊಸ ಚರ್ಮ ಬರಬಹುದು ಎಂದುಕೊಂಡು, ವಿದ್ಯುತ್ ಕಂಬಕ್ಕೆ ತನ್ನ ಮೂಗನ್ನು ಬಡಿಸಿಕೊಂಡಿದ್ದ. ಆಸ್ಪತ್ರೆಗೆ ಸೇರಿ ಮೂಗು ಇನ್ನಷ್ಟು ವಿಕಾರವಾಗಿ ನಾಲ್ಕೈದು ಹೊಲಿಗೆಗಳನ್ನು ಪಡೆದುಕೊಂಡಿತು.

ಅವನ ಸ್ನೇಹಿತ ಆಸ್ಪತ್ರೆಗೆ ಬಂದು ಬೈದಿದ್ದಲ್ಲದೆ ಗೇಲಿ ಮಾಡಿದ –ಅದೇನು ಕೂದಲೋ ಅಥವಾ ಉಗುರೋ ಕತ್ತರಿಸಿದರೆ ಪುನಃ ಬೆಳೆಯುವುದಕ್ಕೆ ಎಂದು.

ಇನ್ನೂ ಆಸ್ಪತ್ರೆಯಲ್ಲೆ ಇದ್ದ. ಕಾರ್ತಿಕ ಮಾಸ. ಹೊರಗೆ ಕತ್ತಲು. ಆಕಾಶದ ತುಂಬ ಚುಕ್ಕಿಗಳು. ತಾನಿರುವ ಮಹಡಿಯಿಂದ ಹಾರಿ ಬಿದ್ದು ಪ್ರಾಣವನ್ನು ಕಳೆದುಕೊಳ್ಳುವ ಯೋಚನೆ ಮಾಡಿದ. ಕಿಟಕಿಯ ತುದಿಗೆ ಹೋಗಿ ನಿಂತುಕೊಂಡ. ಆಗ ಅವನಿಗೆ ಪದೇ ಪದೇ ಬೀಳುತ್ತಿದ್ದ ಕನಸೊಂದು ನೆನಪಾಯಿತು. ಅದು: ಈಗಷ್ಟೇ ಮೂಡಿರುವ ಗುಲಾಬಿ ಹೂವಿನ